**IIನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ಬೆಳಗಾವಿ**

**OS No.902/2015**
**PW.1**

**ದಿನಾಂಕಃ 12.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲು 3ನೇ ಪ್ರತಿವಾದಿಪರ ಶ್ರೀಃ MMS ವಕೀಲರಿಂದ.**

3ನೇ ಪ್ರತಿವಾದಿ ವೈಲೇಶನನ್ನು ಮಾಡಿದ ಬೈಲಾಸನ್ನು 2ನೇ ಪ್ರತಿವಾದಿ (KIADB)ರವರ ಕಡೆಯಿಂದ ಪಡೆದುಕೊಂಡಿರುತ್ತೇನೆ. ಸದರಿ ಬೈಲಾಸನ್ನು ನಾನು ನ್ಯಾಯಾಲಯದ ಮುಂದೆ ಹಾಜರು ಪಡಿಸಿರುತ್ತೇನೆ. ಸಾಕ್ಷಿಗೆ ತಾನು ಹಾಜರು ಪಡಿಸಿದ ದಾಖಲಗೆಳನ್ನು ಪರೀಶೀಲನೆ ಮಾಡಿ ಸದರಿ ಬೈಲಾಸನ್ನು ಹಾಜರು ಪಡಿಸಿಲ್ಲ ಎಂದು ನುಡಿಯುತ್ತಾರೆ. ಸದರಿ ಬೈಲಾಸನ್ನು 2ನೇ ಪ್ರತಿವಾದಿಯಿಂದ ಪಡೆದು ಹಾಜರು ಪಡಿಸಿದೆ ಇದ್ದರು ಸಹ ಪಡಿಸಿದ್ದೇನೆ ಎಂದು ಸುಳ್ಳು ಹೇಳತಿದ್ದೇನೆ ಎಂದರೆ ಸರಿಯಲ್ಲ. 2ನೇ ಪ್ರತಿವಾದಿ 3ನೇ ಪ್ರತಿವಾದಿಗೆ ಮಾಡಿಕೊಟ್ಟ ಕ್ರಯದ ಕರಾರು ಪತ್ರದ terms and conditionನ್ನು ನಾನು ನೋಡಿರುತ್ತೇನೆ. ಸದರಿ ಯಾವ ಕಂಡಿಶನನ್ನು ವೈಲೇಟ್ ಮಾಡಿದ್ದಾರೆ ಎಂಬ ಬಗ್ಗೆ ನಾನು ನಿರ್ದಿಷ್ಟವಾಗಿ ನನ್ನ ದಾವೆಯಲ್ಲಿ ಹೇಳಿರುವುದಿಲ್ಲ. ನಿಪಿ. 15 ರ ಪೇಜ್ ನಂ.4 ಪ್ಯಾರ ನಂ.3ನೇದರಲ್ಲಿರುವ ಕಂಡಿಷನನ್ನು 3ನೇ ಪ್ರತಿವಾದಿ ವೈಲೇಷನ್ ಮಾಡಿರುತ್ತಾರೆ. ಸಾಕ್ಷಿಯು ಮುಂದುವರೆದು 2ನೇ ಪ್ರತಿವಾದಿ ಫ್ಯಾಕ್ಟರಿ ಕಟ್ಟಲು ಪರ್ಮಿಷನ್ ನೀಡಿದ್ದು 3ನೇ ಪ್ರತಿವಾದಿ ಶಾಲೆಯನ್ನು ನಿರ್ಮಾಣ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಈ ಕುರಿತು ನಾನು 2ನೇ ಪ್ರತಿವಾದಿಯ ಕಛೇರಿಗೆ ಹೋಗಿ ಇಂಡಷ್ಟೀಯಲ್ ಆಕ್ಟಿವಿಟಿ ಕುರಿತು ನಾನು ಪರಿಶೀಲನೆ ಮಾಡಿರುತ್ತೇನೆ. ನಾನು ಪರಿಶೀಲನೆ ಮಾಡಿರುವ ಕುರಿತು 2ನೇ ಪ್ರತಿವಾದಿಯ ಕಡೆಯಿಂದ ದಾಖಲೆ ಪಡೆದುಕೊಂಡಿರುತ್ತೇನೆ. ಸಾಕ್ಷಿ ತಾನು ಹಾಜರು ಪಡಿಸಿರುವ ದಾಖಲೆಗಳನ್ನು ಪರಿಶೀಲನೆ ಮಾಡಿ ಸದರಿ ದಾಖಲೆಗಳಲ್ಲಿ ಕಾಣುತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ 2ನೇ ಪ್ರತಿವಾದಿಯ ಇಲಾಖೆಯಲ್ಲಿ ಪರಿಶೀಲನೆ ಮಾಡಿದ ಅರ್ಜಿಯನ್ನು ನೀಡಿರುತ್ತೇನೆ ಅದು ನಿಪಿ. 16 ಆಗಿರುತ್ತದೆ. ನಿಪಿ.16ನ್ನು ಹೊರತು ಪಡಿಸಿ ಬೇರೆ ಯಾವುದೇ

ದಾಖಲೆಯನ್ನು ಹಾಜರು ಪಡಿಸಿದ್ದೀರ ಎನ್ನುವ ಪ್ರಶ್ನೆಗೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. industrial purpose ನಲ್ಲಿ ಶಾಲೆ ಮತ್ತು ಆಸ್ಪತ್ರೆ ಮತ್ತು ಇತರೆ ಬರುತಿರುವ ವಿಷಯ ನನಗೆ ಗೊತ್ತಿದ್ದರು ಸಹ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. 2ನೇ ಪ್ರತಿವಾದಿ 3ನೇ ಪ್ರತಿವಾದಿಗೆ ಮೌಲ್ಯವಿತ ಅಲಾಟ್ ಮೆಂಟ್ ಮಾಡಿ ನಂತರ ಕ್ರಯದ ಪತ್ರ ಮಾಡಿಕೊಟ್ಟಿದ್ದರು ಸಹ ನಾನು 3ನೇ ಪ್ರತಿವಾದಿ ಶಾಲೆಯ ವಿರುದ್ದ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. 3ನೇ ಪ್ರತಿವಾದಿ 5ನೇ ಪ್ರತಿವಾದಿಗೆ ಸದರಿ ಲೇಸೆನ್ಸನ್ನು ರಿನಿವಲ್ ಮಾಡಬೇಡಿ ಎಂದು ವಿನಂತಿಸಿಕೊಂಡಿದ್ದು ಆ ವಿಷಯಕ್ಕೆ ಪ್ರತಿಕಾರ ಸಾದಿಸುವ ಉದ್ದೇಶದಿಂದ 3ನೇ ಪ್ರತಿವಾದಿಯ ವಿರುದ್ಧ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ಅಧಿಕಾರ ಇಲ್ಲದೆ ಇದ್ದರು ಸಹ ಈ ದಾವೆಯನ್ನು ಸೃಷ್ಟಿಸಿಕೊಂಡು 3ನೇ ಪ್ರತಿವಾದಿ ವಿರುದ್ಧ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಈ ದಾವೆಯನ್ನು ಸಲ್ಲಿಸಲು ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಸುಳ್ಳು ದಾವೆಯನ್ನು 3ನೇ ಪ್ರತಿವಾದಿ ವಿರುದ್ಧ ಸಲ್ಲಿಸಿ ಅವರಿಗೆ ತೊಂದರೆ ನೀಡುತಿದ್ದೇನೆ ಎಂದರೆ ಸರಿಯಲ್ಲ.

**(ಮರು ವಿಚಾರಣೆ ಇರುವುದಿಲ್ಲ)**

**(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯನ್ನು ಯಥಾವತ್ತಾಗಿ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸರಿಯಿದೆ.**

**ಸಹಿ/-**

**II ಹೆಚ್ಚುವರಿ ನ್ಯಾಯಾಲಯ ಮತ್ತು**
**ಜೆ.ಎಂ.ಎಫ್.ಸಿ. ಬೆಳಗಾವಿ**